# ಯುಗ ನಿರ್ಮಾಣ ಸತ್ ಸಂಕಲ್ಪ

ವಿಶ್ವ ಗಾಯತ್ರಿ ಪರಿವಾರವು **ಯುಗ ನಿರ್ಮಾಣ ಅಭಿಯಾನವನ್ನು** ಕೈಗೆತ್ತಿಕೊಂಡು ಸಂಪೂರ್ಣ ತತ್ಪರತೆಯಿಂದ ಅಗ್ರೇಸರನಾಗಿ ಮುನ್ನಡೆಯುತ್ತಿದೆ. ಇದರ ಬೀಜ ಯುಗ ಋಷಿ ಪಂಡಿತ ಶ್ರೀರಾಮ ಶರ್ಮಾ ಆಚಾರ್ಯರಿಂದ ರಚಿತವಾದ **ಸತ್‌ಸಂಕಲ್ಪ**ವಾಗಿದೆ. ಇದು ನಮ್ಮೆಲ್ಲಾ ಪ್ರಯತ್ನಗಳಿಗೆ ಸುನಿಶ್ಚಿತ ಸ್ವರೂಪದ **ಘೋಷಣಾ ಪತ್ರ**. ಈ ಸತ್‌ಸಂಕಲ್ಪವನ್ನು ಆಧಾರವಾಗಿಟ್ಟುಕೊಂಡೇ ನಮ್ಮೆಲ್ಲಾ ವಿಚಾರಗಳು, ಯೋಜನೆಗಳು, ಕ್ರಿಯಾಕಲಾಪಗಳು ಮತ್ತು ಕಾರ್ಯಕ್ರಮಗಳು ಸಂಚಾಲನೆಯಾಗುತ್ತಿವೆ. ಇದರ ಪ್ರತಿಯೊಂದು ಸೂತ್ರಗಳೂ ವ್ಯಕ್ತಿ, ಕುಟುಂಬ ಮತ್ತು ಸಮಾಜದಲ್ಲಿ ಅಮೂಲಾಗ್ರ ಪರಿವರ್ತನೆಯನ್ನು ತರುವಂತಹ ಸಾಮರ್ಥ್ಯವನ್ನು ಹೊಂದಿವೆ. ಇದು ಐಕ್ಯತೆ, ಸಮತೆಗಳ ಸರ್ವಾಂಗಗಳಿಂದ ಪರಿಪೂರ್ಣವಾಗಿದ್ದು ವಸುಧೈವ ಕುಟುಂಬದ (ವಿಶ್ವ ಕುಟುಂಬದ)ಸಮಗ್ರ ಕಲ್ಪನೆಗಳನ್ನೊಳಗೊಂಡಿದೆ. ಈ ಘೋಷಣಾ ಪತ್ರವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳೋಣ. ಚಿಂತನ ಮನನಗಳನ್ನು ಮಾಡೋಣ. ನಮ್ಮ ಬದುಕಿನ ಅಚ್ಚಿನಲ್ಲಿ ಇದನ್ನು ಸ್ವೀಕರಿಸೋಣ. **ಇನ್ನೊಬ್ಬರಿಗೆ ಉಪದೇಶವನ್ನು ನೀಡುವುದಕ್ಕಿಂತಲೂ ಸ್ವತಃ ಆಚರಣೆಗೆ ತರುವುದರ** ಬಗ್ಗೆ ಈ ಘೋಷಣಾ ಪತ್ರದಲ್ಲಿ ಒತ್ತುಕೊಡಲಾಗಿದೆ. ಪ್ರತಿಯೊಬ್ಬ ಒಳ್ಳೆಯ ಜನರು ಸೇರಿ ಸಂಘಟಿತರಾದಾಗಲೇ ಸುಂದರ ಸಮಾಜದ ನಿರ್ಮಾಣವಾಗುವುದು.

ಯುಗ ಪರಿವರ್ತನೆಗಾಗಿ ಯಾವ ಅವತಾರದ ಅವಶ್ಯಕತೆಯಿದೆಯೋ ಅದು ಮೊದಲಿಗೆ ಸಜ್ಜನರ ಒತ್ತಾಸೆಯ ರೂಪದಲ್ಲಿ ಪ್ರಕಟಗೊಳ್ಳಬೇಕಾಗಿದೆ. ಈ ಅವತಾರದ ಸೂಕ್ಮಸ್ವರೂಪವೇ ಯುಗ ನಿರ್ಮಾಣ **ಸತ್‌ಸಂಕಲ್ಪ**ವಾಗಿದೆ.

---

## ನವ ಸೃಜನೆಗಾಗಿ ಸಂಕಲ್ಪಬದ್ಧ ಯುಗ ಶಕ್ತಿಯ ಸ್ವರೂಪ



# ಯುಗ ನಿರ್ಮಾಣ ಸತ್ ಸಂಕಲ್ಪ

* ನಾವು ಈಶ್ವರನನ್ನು ಸರ್ವವ್ಯಾಪಕ, ನ್ಯಾಯದಾತ ಎಂದು ಒಪ್ಪಿ ಆತನ ಅನುಶಾಸನದಂತೆ ಬದುಕು ಸಾಗಿಸುತ್ತೇವೆ.
* ಶರೀರವನ್ನು ಭಗವಂತನ ಮಂದಿರವೆಂದು ಭಾವಿಸಿ ಆತ್ಮ ಸಂಯಮ ಮತ್ತು ನಿಯಮಿತತೆಯಿಂದ ಆರೋಗ್ಯವನ್ನು ಸಂರಕ್ಷಿಸಿಕೊಳ್ಳುತ್ತೇವೆ.
* ಮನಸ್ಸನ್ನು ದುರ್ವಿಚಾರ ಮತ್ತು ದುರ್ಭಾವನೆಗಳಿಂದ ರಕ್ಷಿಸಿಕೊಳ್ಳಲು ಸ್ವಾಧ್ಯಾಯ ಮತ್ತು ಸತ್ಸಂಗಗಳನ್ನು ಮಾಡುತ್ತೇವೆ.
* ಇಂದ್ರಿಯ ಸಂಯಮ, ಅರ್ಥ ಸಂಯಮ, ಸಮಯ ಸಂಯಮ ಮತ್ತು ವಿಚಾರ ಸಂಯಮಗಳನ್ನು ಸತತವಾಗಿ ಅಭ್ಯಸಿಸುತ್ತೇವೆ.
* ನಮ್ಮನ್ನು ನಾವು ಸಮಾಜದ ಅಭಿನ್ನ ಅಂಗವೆಂದು ಭಾವಿಸುತ್ತೇವೆ. ಎಲ್ಲರ ಹಿತದಲ್ಲಿಯೇ ನಮ್ಮ ಹಿತವೂ ಅಡಗಿದೆಯೆಂದು ತಿಳಿಯುತ್ತೇವೆ.
* ಮರ್ಯಾದೆಗಳನ್ನು ಪಾಲಿಸುತ್ತೇವೆ. ದುಶ್ಚಟಗಳಿಂದ ದೂರವಿರುತ್ತೇವೆ. ನಾಗರೀಕ ಕರ್ತವ್ಯಗಳನ್ನು ನಿರ್ವಹಿಸುತ್ತೇವೆ ಮತ್ತು ಸಮಾಜ ನಿಷ್ಠರಾಗಿರುತ್ತೇವೆ.
* ತಿಳುವಳಿಕೆ, ಪ್ರಾಮಾಣಿಕತೆ, ಜವಾಬ್ದಾರಿ ಮತ್ತು ಸಾಹಸಗಳನ್ನು ಜೀವನದ ಅಭಿನ್ನ ಅಂಗಗಳನ್ನಾಗಿ ಆಳವಡಿಸಿಕೊಳ್ಳುತ್ತೇವೆ.
* ನಮ್ಮ ಪರಿಸರದ ಸುತ್ತಲೂ ಮಾಧುರ್ಯ, ಸ್ವಚ್ಛತೆ, ಅಚ್ಚುಕಟ್ಟುತನ ಮತ್ತು ಸಜ್ಜನಿಕೆಯ ವಾತಾವರಣವನ್ನು ನಿರ್ಮಿಸುತ್ತೇವೆ.
* ಅನೀತಿಯ ಮಾರ್ಗದಿಂದ ಸಫಲತೆಯನ್ನು ಗಳಿಸುವುದಕ್ಕಿಂತ ನೀತಿಯ ಮಾರ್ಗದಲ್ಲಿಯೇ ನಡೆಯುತ್ತೇವೆ. ಒಂದೊಮ್ಮೆ ಅಸಫಲತೆಯೇ ಎದುರಾದರೂ ಅದನ್ನು ವಿನಯದಿಂದ ಅಂಗೀಕರಿಸುತ್ತೇವೆ.
* ಮನುಷ್ಯನ ಮೌಲ್ಯಾಂಕನದ ಒರೆಗಲ್ಲು ಸಫಲತೆ, ಯೋಗ್ಯತೆ ಮತ್ತು ಸಿದ್ಧಿಗಳಲ್ಲ; ಆತನಲ್ಲಿನ ಸದ್ವಿಚಾರ ಮತ್ತು ಸತ್ಕರ್ಮಗಳನ್ನು ಗೌರವಿಸುತ್ತೇವೆ.
* ಯಾವ ರೀತಿಯ ನಡವಳಿಕೆ ನಮಗೆ ಪ್ರಿಯವೆನಿಸುವುದಿಲ್ಲವೋ ಆ ರೀತಿಯಲ್ಲಿ ನಾವೂ ಬೇರೆಯವರೊಂದಿಗೆ ನಡೆದುಕೊಳ್ಳುವುದಿಲ್ಲ.
* ಸ್ತ್ರೀ–ಪುರುಷರು ಪರಸ್ಪರ ಪವಿತ್ರಭಾವವನ್ನಿರಿಸಿಕೊಳ್ಳುತ್ತೇವೆ.
* ಜಗತ್ತಿನಲ್ಲಿ ಸತ್ ಪ್ರವೃತ್ತಿಗಳ ಪುಣ್ಯಪ್ರಸಾರಕ್ಕಾಗಿ ನಮ್ಮ ಸಮಯ, ಜ್ಞಾನ , ಪ್ರಭಾವ, ಪುರುಷಾರ್ಥಗಳ ಒಂದು ಅಂಶವನ್ನು ನಿಯಮಿತವಾಗಿ ನೀಡುತ್ತಲೇ ಇರುತ್ತೇವೆ.
* ಪರಂಪರೆಗಿಂತಲೂ ವಿವೇಕಕ್ಕೆ ಮಹತ್ತ್ವವನ್ನು ನೀಡುತ್ತೇವೆ.
* ಸಜ್ಜನರನ್ನು ಸಂಘಟಿಸುತ್ತೇವೆ. ಅನೀತಿಯನ್ನು ಎದುರಿಸುತ್ತೇವೆ. ಮತ್ತು ನವಸೃಷ್ಟಿಯ ಕಾರ್ಯಗಳಲ್ಲಿ ಸಂಪೂರ್ಣ ಆಸಕ್ತಿಯಿಂದ ಭಾಗವಹಿಸುತ್ತೇವೆ.
* ರಾಷ್ಟ್ರೀಯ ಏಕತೆ ಮತ್ತು ಸಮತೆಯ ಬಗ್ಗೆ ನಿಷ್ಠಾವಂತರಾಗಿರುತ್ತೇವೆ. ಜಾತಿ, ಲಿಂಗ, ಭಾಷೆ, ಪ್ರಾಂತ, ಸಂಪ್ರದಾಯ ಮೊದಲಾದವುಗಳನ್ನು ಮುಂದಿಟ್ಟು ಭೇದ–ಭಾವಗಳನ್ನು ತೋರುವುದಿಲ್ಲ.
* ಮನುಷ್ಯನು ತನ್ನ ಭಾಗ್ಯದ ನಿರ್ಮಾತೃವು ತಾನೇ ಆಗಿದ್ದಾನೆ. ನಾವು ಉತ್ಕೃಷ್ಟರಾಗುತ್ತೇವೆ. ಇನ್ನುಳಿದವರನ್ನೂ ಶ್ರೇಷ್ಠರನ್ನಾಗಿಸುತ್ತೇವೆ. ಇದರಿಂದ ನಿಶ್ಚಿತವಾಗಿ ಯುಗವು ಬದಲಾಗುತ್ತದೆ. ಇದು ನಮ್ಮ ಅಚಲ ನಂಬಿಕೆಯಾಗಿದೆ.
* ನಾವು ಬದಲಾಗುತ್ತೇವೆ. ಯುಗವೂ ಬದಲಾಗುತ್ತದೆ. ನಾವು ಸುಧಾರಿಸುತ್ತೇವೆ. ಯುಗವೂ ಸುಧಾರಿಸುತ್ತದೆ. ಈ ಸತ್ಯದ ಬಗ್ಗೆ ನಮಗೆ ಸಂಪೂರ್ಣ ವಿಶ್ವಾಸವಿದೆ.